ಅನುಮಾನ ಹಾಗೂ ಸಂದಿಗ್ಧತೆಯಲ್ಲಿ ತೊಳಲಾಡುತ್ತ ನಿಂತರು. ನನ್ನ ಮಾತು ಅರ್ಥವಾಗಿರಬೇಕಲ್ಲ ಈಗ ಎಂಬ ಗತ್ತಿನಲ್ಲಿ ಸುಬ್ರೊ ಹೊರಗೆ ನಿಂತಿದ್ದ, ಫ಼ೆಡ್ರಿಕ್ ಲೈಬ್ರರಿಯ ಮೆಟ್ಟಲಿಳಿದು ಬಂದು ಪಾರ್ಕ್ ಮಾಡಿದ್ದ ಕಾರುಗಳಾಚೆಯ ಫಾರ್ಮ್ ಹೌಸಿನ ಪಕ್ಕದ ಪೆಂಡಾಲಿನ ಕೆಳಗೆ ಜಮಾಯಿಸಿದ್ದ ಜನರನ್ನು ತೋರಿಸಿ, 'ಇನ್ನಷ್ಟು ಮಾಹಿತಿ ಅಲ್ಲಿ ಸಿಗಬಹುದು' ಎಂದ. ಅಲ್ಲಿ ನಾಲ್ಕಾರು ಕುಟುಂಬಗಳ ಮೂರು ತಲೆಮಾರಿನವರಾಗಿದ್ದರು. ಹಳ್ಳಿಯ ಫಾರ್ಮಿನಲ್ಲಿ ಕೆಲಕಾಲ ಮೋಜು ಮಾಡಲು ಅವರು ಕುಟುಂಬ ಸಹಿತ ಸಿಟಿಯಿಂದ ಬಂದಿದ್ದರು. ಕಟಾವು ಮಾಡಿದ ಹುಲ್ಲಿನ ಗದ್ದೆಯ ಸನಿಹದ ರಸ್ತೆ ಗುಂಟ ಸುಬ್ರೊ ಮತ್ತು ರಾವ್ ನಡೆದು ಹಂಚಿನ ಹಳೆಯ ಕೊಟ್ಟಿಗೆಯನ್ನು ತಲುಪಿದರು. ಕೆಲಸದಲ್ಲಿ ನಿರತರಾಗಿದ್ದ ಅವರು ಹಲೋ ಎಂದರು. ವಿಚಾರಿಸಲಿಲ್ಲ. ಸೇಬು ಮರಕ್ಕೆ ಕ್ಲಿಯೊ ಫೋಟೊ ಇರುವ ಕಟೌಟ್ ನಿಲ್ಲಿಸಿ ಹುಟ್ಟುಹಬ್ಬದ ಶುಭಾಶಯವನ್ನು ಬರೆದಿದ್ದರು. ನಾಲ್ಕು ಕಡೆ ಟೇಬಲ್ ಸುತ್ತ ಕುರ್ಚಿ ಇಟ್ಟಿದ್ದರು. ಬಿಳಿ ಮತ್ತು ಹಳದಿ ಬಟ್ಟೆಯ ಬಿಡಿಸಿದ ಕೊಡೆ ನಡುವೆ ನೆಟ್ಟಿದ್ದರು. ನಕ್ಷತ್ರಗಳಂತೆ ಮೊಗ್ಗಿನಂತಹ ದೀಪಗಳು ಮಿನುಗುತ್ತಿದ್ದವು. ಗಾಳಿ ಜತೆ ಬಲೂನ್ ಆಟವಾಡುತ್ತಿದ್ದವು. ಕ್ಲಿಯೊ ಹಾಡಿದ ಸಂಗೀತ ಬೆಳದಿಂಗಳಂತೆ ಹಿತವಾಗಿ ಹರಡಿತ್ತು. ಕ್ಲಿಯೊಳ ಅಭಿಮಾನಿಗಳು ಹುಟ್ಟುಹಬ್ಬದ ಆಚರಣೆಯನ್ನು ಸೇರಲು ಅವರನ್ನು ಕರೆದರು. ಕ್ಯಾಂಡಲ್ ಹಚ್ಚಿ ಕೇಕ್ ಹಂಚಿದರು. ಹಾಡಿನ ಒಳ ತಿರುಳಿನಲ್ಲಿ ಕಲ್ಯಾಣಿಯ ಸ್ಥಾಯಿ ದನಿ ಕೇಳಿ ರಾವ್ ಉಲ್ಲಸಿತರಾದರು. ಕಲ್ಯಾಣಿಯನ್ನು ಹೆಮ್ಮೆಯಿಂದ ಸ್ಮರಿಸುತ್ತಾ ಅವರ ಸಂತಸದಲ್ಲಿ ಭಾಗಿಯಾದರು. ಕ್ಲಿಯೊ ಭಾರತದ ಮೂಲದವಳು ಎಂದು ಹೇಳಿಕೊಳ್ಳಲು ಉತ್ಸಾಹದಲ್ಲಿ ಉಕ್ಕಿದರು. ಅಪ್ಪನ ವರ್ತನೆ ಅತಿ ಆದರೆ ಅಸಹ್ಯ ಎಂದು ಸುಬ್ರೊ, 'ಅವ್ರಿಗೆ ಫಾರ್ಮಾಲಿಟಿ ಆಗೋದಿಲ್ಲ' ಎಂದ. ಅಪ್ಪನ ಸಮಾಧಾನಕ್ಕೆ ಸುಬ್ರೊ ಗಿಟಾರ್ ನುಡಿಸುವುದನ್ನು ನಿಲ್ಲಿಸಿದವನ ಸನಿಹ ಹೋಗಿ, 'ಕ್ಲಿಯೊ ನೋಡ ಬೇಕಿತ್ತು. ನನ್ನ ತಂದೆ ಇಂಡಿಯಾದಿಂದ ಅವರನ್ನು ಭೇಟಿಯಾಗಲೆಂದೇ ಬಂದಿದ್ದಾರೆ' ಎಂದ. ರಾವ್ ಅಳುಕಿನಿಂದ ತಳಮಳಿಸಿದರು. ಸುಬ್ರೊ ನುಡಿದದ್ದು ನಿಜವಲ್ಲವೆಂದು ವಾದಿಸಲು ಅವರಿಗೆ ಧೈರ್ಯ ಬರಲಿಲ್ಲ. ಬಲವಾದ ಕಾರಣ ನೀಡಿದರೆ ಕ್ಲಿಯೊ ಭೇಟಿ ಸುಲಭವಾಗಬಹುದೆಂದು ಸುಬ್ರೊ ಹಾಗೆ ಹೇಳಿದ್ದನೇ ಹೊರತು ಅವನಿಗೇನು ಸಂಶಯ ಬಂದಿರಲಿಲ್ಲ.

ಜಟಾಧಾರಿ ಗಿಟಾರ ವಾದಕ, 'ನಾಳೆ ಕಿಂಡರ್ ಗಾರ್ಟನ್ ಸ್ಕೂಲಿಗೆ ಕ್ಲಿಯೊ ಬರ್ತಾಳೆ. ಅಲ್ಲಿ ಕಾಣ ಬಹುದು' ಎಂದ. ಕಿಂಡರ್‌ಗಾರ್ಟನ್ ಸುಬ್ರೊ ಮನೆಯ ಪಕ್ಕದಲ್ಲೇ ಇದೆ. ಮದುವೆ ಹೊಸ್ತಿಲಲ್ಲಿ ನಿಂತ ಸುಬ್ರೊ, ಮರೆಯಲಾಗದ ಗೆಳತಿಯನ್ನು ಹುಡುಕಿಕೊಂಡು ಸಾವಿರಾರು ಮೈಲುಗಳ ಸಮುದ್ರ ದಾಟಿ ಬಂದಿದ್ದಾನೆ ಅಪ್ಪ ಎಂದು ಯೋಚಿಸಿರಬಹುದು. ಆ ಕಲ್ಪನೆಗೆ ರಾವ್ ಮುಜುಗರದಿಂದ ಮುದುಡಿದರು. ಮನೆ ತಲುಪುವವರೆಗೆ ಇಬ್ಬರೂ ಮಾತಾಡಲಿಲ್ಲ. ಹೊರಗೆ ಚಳಿಯಿದ್ದರೂ ರಾವ್ ಬೆವರಿದ್ದರು. 'ಕಲ್ಯಾಣಿ ಮತ್ತು ಕ್ಲಿಯೊ ಇಬ್ಬರೂ ಒಂದೇ ಎಂದು ನಿನ್ನ ನಂಬಿಕೆಯಾ?' ಸೋಫಾದಲ್ಲಿ ಕುಳಿತ ರಾವ್ ಅವರಿಗೆ ತಣ್ಣನೆಯ ಗ್ಲಾಸ್ ನೀರು ಕೊಡುತ್ತ ಸುಬ್ರೊ ಮೌನ ಮುರಿದ. ತಾನು ಮುಗ್ಧನಲ್ಲ ಎಂದು ಸಾಬೀತು ಮಾಡುವ ಅಗತ್ಯವಿಲ್ಲವೆಂದು ರಾವ್ ಮಾತಾಡಲಿಲ್ಲ. ಸುಬ್ರೊ ಮದುವೆ ಪ್ರಸ್ತಾವನೆ ಮಾಡುವ ಯೋಚನೆಯಿತ್ತು. ಈಗ ಜೊತೆಯಲ್ಲಿ ನಿನ್ನ ಅವ್ವಳಿದ್ದಿದ್ದರೆ ಎಷ್ಟು ಸಂತೋಷಪಡುತ್ತಿದ್ದಳಲ್ಲ ಎಂದು ನೆನಪಿಸುವ ಆಸೆಯಾಗಿತ್ತು. ಆದರೆ ಅವೆಲ್ಲ ಕಲ್ಯಾಣಿಯ ಭೇಟಿಯ ಎದುರು ಕೃತಕ ಎಂದನಿಸಿತು ಅವರಿಗೆ. 'ನಾಳೆ ನೀನು ಆಫೀಸಿಗೆ ರಜೆ ಹಾಕೋದು ಬ್ಯಾಡ. ಸ್ಕೂಲು ಎಲ್ಲಿ ಅದ ಅಂತ ಕಾಣ್ಸು. ನಾನೇ ಹೋಗಿ ಬರ್ತೀನಿ' ಎಂದರು. 'ಸ್ಕೂಲ್ ಮ್ಯಾನೇಜರ್ ನನಗ ಗೊತ್ತು. ಆಫೀಸಿಗೆ ಹೋಗೊ ಮುನ್ನ ಅವ್ರಿಗೆ ತಿಳಿಸಿ ಹೋಗ್ತೇನೆ' ಎಂದ. ಮನೆಯಿಂದ ನೂರು ಹೆಜ್ಜೆಯ ಅಂತರದಲ್ಲಿ ಕಿಂಡರ್‌ಗಾರ್ಟನ್ ಇದೆ. ರಸ್ತೆ ಮತ್ತು ಕಾಡಿನ ನಡುವೆ ಸ್ಕೂಲಿದೆ. ಸುಮಾರು ಇಪ್ಪತ್ತು ಮಕ್ಕಳು ಹ್ಯಾಟು ಬೂಟು ತೊಟ್ಟು ಮಧ್ಯಾಹ್ನದವರೆಗೆ ಆಟವಾಡುತ್ತ ಓಡಾಡುವುದನ್ನು ರಾವ್ ನೋಡಿದ್ದರು. 'ಹತ್ತು ಗಂಟೆಯ ಸುಮಾರಿಗೆ ಉದ್ದನೆಯ ಹಳದಿ ಬಸ್ ಬಂದು ನಿಂತ ಮ್ಯಾಲ ಸ್ಕೂಲಿಗೆ ಹೋದ್ರೆ ಸಾಕಾಗ್ತದ' ಸುಬ್ರೊ ತಿಳಿಸಿದ.

ರಾತ್ರಿಯ ಊಟಕ್ಕೆ ಫ್ರಿಜ್‌ನಲ್ಲಿಟ್ಟ ಪಾಸ್ತಾ ಇತ್ತು.